# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 807 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)<br>(ಸ್ಥಳೀಯ ಸಂಸ್ಥೆಗಳ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.03.2025 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿದೇಶಿ ಪ್ರಯಾಣ ಅಥವಾ ವಿದೇಶದಲ್ಲಿ ಉದ್ಯೋಗ ಪಡೆಯಲು ವಿಸಾ ಮಾಡಿಸಿ ಕೊಡುವ ನೆಪದಲ್ಲಿ ನಂಬಿಸಿ; ಹಣ ಕಳೆದುಕೊಂಡು ಅಮಾಯಕರು ವಂಚನೆಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ವಿದೇಶಿ ಪ್ರಯಾಣ ಅಥವಾ ವಿದೇಶದಲ್ಲಿ ಉದ್ಯೋಗ ಪಡೆಯಲು ವೀಸಾ ಮಾಡಿ ಕೊಡುವ ನೆಪದಲ್ಲಿ ನಂಬಿಸಿ ಹಣ ವಂಚನೆ ಮಾಡಿದ ಪ್ರಕರಣಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ರಾಜ್ಯದಲ್ಲಿ ದಾಖಲಾಗಿರುವ ಇಂತಹ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು ಮತ್ತು ಸದರಿ ಏಜೆನ್ಸಿ ಅಥವಾ ವ್ಯಕ್ತಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ವಿದೇಶಿ ಪ್ರಯಾಣ ಅಥವಾ ವಿದೇಶದಲ್ಲಿ ಉದ್ಯೋಗ ಪಡೆಯಲು ವೀಸಾ ಮಾಡಿ ಕೊಡುವ ನೆಪದಲ್ಲಿ ನಂಬಿಸಿ ಹಣ ವಂಚನೆ ಮಾಡಿದ ಪ್ರಕರಣಗಳ ಕುರಿತು 2022 ರಿಂದ 2025 ನೇ ಸಾಲಿನಲ್ಲಿ ಒಟ್ಟು 55 ಪ್ರಕರಣಗಳು ದಾಖಲಾಗಿರುತ್ತದೆ. ಸದರಿ ಪ್ರಕರಣಗಳಲ್ಲಿ ಒಟ್ಟು 97 ಏಜೆನ್ಸಿ/ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ.<br>ಜಿಲ್ಲಾವಾರು ಪ್ರಕರಣಗಳ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ) | ಸದರಿ ಏಜೆನ್ಸಿ ಅಥವ ವ್ಯಕ್ತಿಗಳ ಮೇಲೆ ಕಾನೂನಿನ ಅಡಿಯಲ್ಲಿ ವಿಧಿಸಬಹುದಾದ ಗರಿಷ್ಠ ಶಿಕ್ಷೆ ಯಾವುದು: (ಪ್ರಮಾಣದ ವಿವರ ನೀಡುವುದು) | **ಏಜೆನ್ಸಿ ಅಥವಾ ವ್ಯಕ್ತಿಗಳ ಮೇಲೆ ಕಾನೂನಿನ ಅಡಿಯಲ್ಲಿ ವಿಧಿಸಬಹುದಾದ ಗರಿಷ್ಠ ಶಿಕ್ಷೆಯ ವಿವರಗಳು:-**<br>➢ 1983ರ ಎಮಿಗ್ರೇಷನ್ ಆಕ್ಟ್ ಕಲಂ: 24 ಪ್ರಕಾರ, ವಲಸೆಗೆ ಸಂಬಂಧಿಸಿದ ಅಪರಾಧಗಳಿಗೆ ಶಿಕ್ಷೆಯು ಎರಡು ವರ್ಷಗಳ ವರೆಗೆ ಜೈಲು ಶಿಕ್ಷೆ, ಎರಡು ಸಾವಿರ ರೂಪಾಯಿಗಳ ವರೆಗೆ ದಂಡ ಅಥವಾ ಎರಡನ್ನೂ ಒಳಗೊಂಡಿರುತ್ತದೆ,<br>➢ ಭಾರತೀಯ ನ್ಯಾಯ ಸಂಹಿತೆ-2023 ಕಲಂ 318 ರಂತೆ ಏಳು ವರ್ಷಗಳವರೆಗೆ ಕಾರಾಗೃಹ ವಾಸ ಹಾಗೂ ಜುಲ್ಮಾನೆ ವಿಧಿಸುವ ಅವಕಾಶವಿರುತ್ತದೆ.<br>➢ ಅಂತಿಮವಾಗಿ ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಏಜೆನ್ಸಿ ಅಥವಾ ವ್ಯಕ್ತಿಗಳ ಮೇಲೆ ಮಾನ್ಯ ನ್ಯಾಯಾಲಯವು ಶಿಕ್ಷೆಯ ಪ್ರಮಾಣವನ್ನು ನಿರ್ಧರಿಸುತ್ತದೆ. |

| | | |
|---|---|---|
| ಈ) | ಇಂತಹ ಪ್ರಕರಣ ಪುನಃ ಮರುಕಳಿಸದಂತೆ ತಡೆಯಲು ಸರ್ಕಾರ ಕೈಗೊಳ್ಳುವ ಕ್ರಮವೇನು? | **ವಿದೇಶಿ ಪ್ರಯಾಣ ಅಥವಾ ವಿದೇಶದಲ್ಲಿ ಉದ್ಯೋಗ ಪಡೆಯಲು ವೀಸಾ ಮಾಡಿ ಕೊಡುವ ನೆಪದಲ್ಲಿ ವಂಚಿಸುವ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:-**<br>➢ ವಿದೇಶಾಂಗ ಸಚಿವಾಲಯದಲ್ಲಿ ನೋಂದಾಯಿತ ಅಧಿಕೃತ ಏಜೆನ್ಸಿಗಳ ವಿವರಗಳನ್ನು Protector of Emigrants Bengaluruರವರು ಕಾಲಕಾಲಕ್ಕೆ ಕಚೇರಿಗೆ ಕಳುಹಿಸಿಕೊಡುತ್ತಿದ್ದು, ಸದರಿ ಅಧಿಕೃತ ಏಜೆನ್ಸಿಗಳು ಅಲ್ಲದೇ ಇತರೆ ವೀಸಾ ಮಾಡಿಸಿ ಕೊಡುವುದಾಗಿ ಇರುವ ಅನಧಿಕೃತ ಏಜೆನ್ಸಿಗಳ ಬಗ್ಗೆ ಮಾಹಿತಿ ಕಲೆ ಹಾಕಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಎಮಿಗ್ರೇಷನ್ ಕಾಯ್ದೆ THE EMIGRATION ACT 1983 ಅನ್ವಯ ಕಾನೂನುಬದ್ಧ ಸಾಗರೋತ್ತರ ನೇಮಕಾತಿ ವ್ಯವಹಾರವನ್ನು ಕೈಗೊಳ್ಳಲು ಇರುವ ಮಾನದಂಡಗಳನ್ನು ಪಾಲಿಸದೆ ಮತ್ತು ನಿಯಮಗಳನ್ನು ಮೀರಿ ಯಾವುದೇ ತರಹದ ಸಾಗರೋತ್ತರ ನೇಮಕಾತಿ ವ್ಯವಹಾರವನ್ನು ಕೈಗೊಳ್ಳುವ ಯಾವುದೇ ಏಜೆನ್ಸಿ/ಏಜೆಂಟ್/ಸಂಸ್ಥೆಯ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲಾಗುವುದು.<br>➢ ಅನಧಿಕೃತ ಸಾಗರೋತ್ತರ ನೇಮಕಾತಿ ವ್ಯವಹಾರವನ್ನು ನಡೆಸುತ್ತಿರುವ ಯಾವುದೇ ಏಜೆನ್ಸಿ/ಏಜೆಂಟ್/ಸಂಸ್ಥೆಗಳು ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.<br>➢ ಇಂತಹ ಅನಧಿಕೃತ ಏಜೆನ್ಸಿ/ಏಜೆಂಟ್/ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ವರದಿ ಮಾಡಲು ಮತ್ತು ಸಲಹೆಗಳಿಗಾಗಿ ರಾಷ್ಟ್ರ ಮತ್ತು ರಾಜ್ಯಗಳ ಹಂತದಲ್ಲಿ ಇರುವ ಸಕ್ಷಮ ಅಧಿಕಾರಿಗಳ ವಿವರಗಳನ್ನು ಅಧೀನ ಅಧಿಕಾರಿಗಳೊಂದಿಗೆ ಹಂಚಿಕೊಂಡಿದ್ದು, ಇಂತಹ ಪ್ರಕರಣಗಳು ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮಗಳನ್ನು ಜರುಗಿಸಲಾಗುವುದು.<br>➢ ಅನಧೀಕೃತ ಏಜೆನ್ಸಿ/ಏಜೆಂಟ್/ಸಂಸ್ಥೆಗಳ ಮತ್ತು ನೊಂದಾಯಿತ ನೇಮಕಾತಿ ಏಜೆಂಟ್‌ಗಳ ಮಾಹಿತಿ ಪಡೆಯಲು ಇ-ಮೈಗ್ರೇಟ್ ಪೋರ್ಟಲ್‌ನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುವುದು.<br>➢ ಎಮಿಗ್ರೇಷನ್ ಕಾಯ್ದೆ(THE EMIGRATION ACT 1983)ಯ ಉಲ್ಲಂಘನೆಯ ಪ್ರಕರಣಗಳ ಬಗ್ಗೆ ಸೂಕ್ತ ನಿಗಾವಹಿಸಿ ಕ್ರಮ ಕೈಗೊಳ್ಳಲಾಗುವುದು.<br>➢ ಅನಧೀಕೃತ ಸಾಗರೋತ್ತರ ನೇಮಕಾತಿ ವ್ಯವಹಾರವನ್ನು ನಡೆಸುವವರ ವಂಚನೆಯ ಜಾಲದ ಕಾರ್ಯವಿಧಾನ ಮತ್ತು ಇಂತಹ ವಂಚನೆಗಳಿಗೆ |

| | | |
|---|---|---|
| | | ಸಾರ್ವಜನಿಕರು ಬಲಿಯಾಗದಂತೆ ಜನರಲ್ಲಿ ಸಮರ್ಪಕ ಮಾಧ್ಯಮಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.<br>➢ ಸಾಗರೋತ್ತರ ನೇಮಕಾತಿ ಬಗ್ಗೆ ಮುದ್ರಣ ಮಾಧ್ಯಮ ಮತ್ತು ವಿದ್ಯುನ್ಮಾನ ಸಮೂಹ ಮಾಧ್ಯಮಗಳ ಮೂಲಕ ಜಾಹೀರಾತು ನೀಡುವುದರ ಮೇಲೆ ನಿಗಾ ವಹಿಸಲಾಗಿದೆ.<br>➢ ಸಾಗರೋತ್ತರ ಕೆಲಸಗಳಿಗೆ ಹೋಗುವ ವಲಸೆ ಕಾರ್ಮಿಕರು ಕೆಲಸಗಳಿಗಾಗಿ ಹೊರದೇಶಗಳಿಗೆ ಹೋಗಬೇಕಾದರೆ ಪಾಲಿಸಬೇಕಾದ ನಿಯಮಗಳ ಕುರಿತು ಸಾರ್ವಜನಿಕರೊಂದಿಗೆ ಮಾಹಿತಿಯನ್ನು ಹಂಚಿಕೊಂಡು ಜಾಗೃತಿ ಮೂಡಿಸಲಾಗಿದೆ. |

ಸಂಖ್ಯೆ:ಹೆಚ್‌ಡಿ 25 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

"ಅನುಬಂಧ"

| ವಿದೇಶಿ ಪ್ರಯಾಣ ಅಥವಾ ವಿದೇಶದಲ್ಲಿ ಉದ್ಯೋಗ ಪಡೆಯಲು ವಿಸಾ ಮಾಡಿಸಿ ಕೊಡುವ ನೆಪದಲ್ಲಿ ವಂಚಿಸಿರುವ ಪ್ರಕರಣಗಳ ವಿವರ | | | |
|---|---|---|---|
| ಕ್ರ. ಸಂ. | ಘಟಕದ ಹೆಸರು | ಪ್ರಕರಣಗಳ ಸಂಖ್ಯೆ | ಏಜೆನ್ಸಿ ಮತ್ತು ಆರೋಪಿಗಳ ಸಂಖ್ಯೆ |
| 1 | ಪೊಲೀಸ್ ಆಯುಕ್ತರು, ಬೆಂಗಳೂರು ನಗರ | 24 | 51 |
| 2 | ಪೊಲೀಸ್ ಆಯುಕ್ತರು, ಮೈಸೂರು ನಗರ | 1 | 4 |
| 3 | ಪೊಲೀಸ್ ಆಯುಕ್ತರು,ಹು-ಧಾರವಾಡ ನಗರ | 1 | 1 |
| 4 | ಪೊಲೀಸ್ ಆಯುಕ್ತರು, ಮಂಗಳೂರು ನಗರ | 9 | 12 |
| 5 | ಪೊಲೀಸ್ ಆಯುಕ್ತರು, ಬೆಳಗಾವಿ ನಗರ | 0 | 0 |
| 6 | ಪೊಲೀಸ್ ಆಯುಕ್ತರು, ಕಲಬುರ್ಗಿ ನಗರ | 0 | 0 |
| 7 | ಎಸ್.ಪಿ. ಬೆಂಗಳೂರು ಜಿಲ್ಲೆ | 0 | 0 |
| 8 | ಎಸ್.ಪಿ. ತುಮಕೂರು ಜಿಲ್ಲೆ | 0 | 0 |
| 9 | ಎಸ್.ಪಿ. ಕೋಲಾರ ಜಿಲ್ಲೆ | 0 | 0 |
| 10 | ಎಸ್.ಪಿ. ಕೆ.ಜಿ.ಎಫ್ ಜಿಲ್ಲೆ | 2 | 3 |
| 11 | ಎಸ್.ಪಿ. ರಾಮನಗರ ಜಿಲ್ಲೆ | 0 | 0 |
| 12 | ಎಸ್.ಪಿ. ಚಿಕ್ಕಬಳ್ಳಾಪುರ ಜಿಲ್ಲೆ | 0 | 0 |
| 13 | ಎಸ್.ಪಿ. ಮೈಸೂರು ಜಿಲ್ಲೆ | 1 | 2 |
| 14 | ಎಸ್.ಪಿ. ಹಾಸನ ಜಿಲ್ಲೆ | 0 | 0 |
| 15 | ಎಸ್.ಪಿ. ಚಾಮರಾಜನಗರ ಜಿಲ್ಲೆ | 0 | 0 |
| 16 | ಎಸ್.ಪಿ. ಕೊಡಗು ಜಿಲ್ಲೆ | 4 | 8 |
| 17 | ಎಸ್.ಪಿ. ಮಂಡ್ಯ ಜಿಲ್ಲೆ | 0 | 0 |
| 18 | ಎಸ್.ಪಿ. ದಾವಣಗೆರೆ ಜಿಲ್ಲೆ | 0 | 0 |
| 19 | ಎಸ್.ಪಿ. ಹಾವೇರಿ ಜಿಲ್ಲೆ | 0 | 0 |
| 20 | ಎಸ್.ಪಿ. ಶಿವಮೊಗ್ಗ ಜಿಲ್ಲೆ | 1 | 1 |
| 21 | ಎಸ್.ಪಿ. ಚಿತ್ರದುರ್ಗ ಜಿಲ್ಲೆ | 1 | 1 |
| 22 | ಎಸ್.ಪಿ. ದಕ್ಷಿಣ ಕನ್ನಡ ಜಿಲ್ಲೆ | 1 | 1 |
| 23 | ಎಸ್.ಪಿ. ಉತ್ತರ ಕನ್ನಡ ಜಿಲ್ಲೆ | 1 | 3 |
| 24 | ಎಸ್.ಪಿ. ಚಿಕ್ಕಮಗಳೂರು ಜಿಲ್ಲೆ | 3 | 3 |
| 25 | ಎಸ್.ಪಿ. ಉಡುಪಿ ಜಿಲ್ಲೆ ಜಿಲ್ಲೆ | 1 | 1 |
| 26 | ಎಸ್.ಪಿ. ಬೆಳಗಾವಿ ಜಿಲ್ಲೆ | 2 | 2 |
| 27 | ಎಸ್.ಪಿ. ಗದಗ್ ಜಿಲ್ಲೆ | 0 | 0 |
| 28 | ಎಸ್.ಪಿ. ವಿಜಯಾಪುರ ಜಿಲ್ಲೆ | 1 | 1 |
| 29 | ಎಸ್.ಪಿ. ಧಾರವಾಡ ಜಿಲ್ಲೆ | 0 | 0 |
| 30 | ಎಸ್.ಪಿ. ಬಾಗಲಕೋಟೆ ಜಿಲ್ಲೆ | 0 | 0 |
| 31 | ಎಸ್.ಪಿ. ಕಲ್ಬುರ್ಗಿ ಜಿಲ್ಲೆ | 0 | 0 |
| 32 | ಎಸ್.ಪಿ. ಬೀದರ್ ಜಿಲ್ಲೆ | 2 | 3 |
| 33 | ಎಸ್.ಪಿ. ಯಾದಗಿರಿ ಜಿಲ್ಲೆ | 0 | 0 |
| 34 | ಎಸ್.ಪಿ. ಬಳ್ಳಾರಿ ಜಿಲ್ಲೆ | 0 | 0 |
| 35 | ಎಸ್.ಪಿ. ರಾಯಚೂರು ಜಿಲ್ಲೆ | 0 | 0 |
| 36 | ಎಸ್.ಪಿ. ಕೊಪ್ಪಳ ಜಿಲ್ಲೆ | 0 | 0 |
| 37 | ಎಸ್.ಪಿ. ವಿಜಯನಗರ ಜಿಲ್ಲೆ | 0 | 0 |
| 38 | ಎಸ್.ಪಿ. ರೈಲ್ವೇಸ್ | 0 | 0 |
| | **ಒಟ್ಟು** | **55** | **97** |